ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ : 27.12.2023

**ಜ್ಞಾಪನ**

ವಿಷಯ: ಡಿಸೆಂಬರ್-2023 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ಸಿದ್ಧಪಡಿಸುವ ಮತ್ತು ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

ಉಲ್ಲೇಖ:ಈ ಕಛೇರಿ ಜ್ಞಾಪನ ಸಂಖ್ಯೆ: :ಬಿಟಿಇ/06/ಇಸಿಎಸ್(1)/2023 ದಿನಾಂಕ:21.12.2023

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿಸೆಂಬರ್-2023 ರ ಡಿಪ್ಲೋಮ ಸೆಮಿಸ್ಟರ್ C-03, C-09 & C-15 ಮತ್ತು C-20 ಪಠ್ಯಕ್ರಮಗಳ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು 6 ವಿವಿಧ ವಿಕೇಂದ್ರೀಕೃತ ಮೌಲ್ಯಮಾಪನ ಕೇಂದ್ರಗಳಲ್ಲಿ ದಿನಾಂಕ:08.01.2024 ರಿಂದ ನಡೆಸಲು ಕ್ರಮವಹಿಸಲಾಗಿದೆ.

I. ಮೌಲ್ಯಮಾಪನ ಕಾರ್ಯಕ್ಕಾಗಿ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ಸಂಬಂಧಿಸಿದ ಪ್ರಶ್ನೆಪತ್ರಿಕೆ ರಚನಾಕಾರರು (ಮುಖ್ಯ ಪರೀಕ್ಷಕರು) ಯಾವುದೇ ತಪ್ಪುಗಳು, ದೋಷಗಳು, ಅಸ್ಪಷ್ಟತೆ ಮತ್ತು ಗೊಂದಲ ಇರದಂತೆ MS WORDನಲ್ಲಿ A4 ಸೈಜ್‌ನ ಹಾಳೆಯಲ್ಲಿ ಸಿದ್ಧಪಡಿಸಿ ಪ್ರತಿ ಪುಟದಲ್ಲಿ ಸಹಿ ಮಾಡಿ ಕೊನೆಯ ಪುಟದಲ್ಲಿ ದೃಢೀಕರಿಸಿ ಕೂಡಲೇ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ ಸದಸ್ಯರುಗಳಿಗೆ ಹಾಗೂ bteqpindent1@gmail.com ಮಿಂಚಂಚೆಗೆ ಕಳುಹಿಸಲು ತಿಳಿಸಲಾಗಿದೆ.

II. ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳು ಪ್ರಶ್ನೆ ಪತ್ರಿಕೆ ರಚನಾಕಾರರನ್ನು ಸಂಪರ್ಕಿಸಿ ಸ್ಕೀಂ ಆಫ್ ವ್ಯಾಲುಯೇಷನ್ ಮತ್ತು ಮಾದರಿ ಉತ್ತರಗಳನ್ನು ಪಡೆದು ಈ ಕೆಳಕಂಡ ಅಂಶಗಳನ್ನು ಗಮನಿಸಿ ಪರಿಶೀಲಿಸಿ ದೃಢೀಕರಿಸುವುದು.

- ವಿವಿಧ ಮೌಲ್ಯಮಾಪಕರು ಒಂದೇ ರೀತಿಯಲ್ಲಿ ಅರ್ಥೈಸಿಕೊಂಡು ನಿಖರವಾಗಿ ಅಂಕಗಳನ್ನು ನೀಡಲು ಅನುವಾಗುವಂತೆ ತಪ್ಪುಗಳು/ಗೊಂದಲಗಳು/ಅಸ್ಪಷ್ಟತೆಗಳನ್ನು ಸರಿಪಡಿಸುವುದು.
- Pathway Subjects ಗಳ ಸ್ಕೀಂ ಆಫ್ ವ್ಯಾಲುಯೇಷನ್ ಮತ್ತು ಮಾದರಿ ಉತ್ತರಗಳನ್ನು ಪರಿಶೀಲಿಸುವಾಗ ಪ್ರಶ್ನೆಪತ್ರಿಕೆ ರಚನಾಕಾರರು & ಆಯ್ದ ಮೌಲ್ಯಮಾಪಕರುಗಳೊಡನೆ ಸಮಾಲೋಚಿಸಿ ಸೂಕ್ತ/ಯುಕ್ತ ರೀತಿಯಲ್ಲಿ ಅಂತಿಮಗೊಳಿಸುವುದು.
- ಅಂಕಗಳನ್ನು ವಿಂಗಡಿಸಿರುವುದನ್ನು (ಸ್ಕೀಂ ಆಫ್ ವ್ಯಾಲ್ಯುಯೇಷನ್) ಅತ್ಯಂತ ಜಾಗ್ರತೆಯಿಂದ ಪರಿಶೀಲಿಸುವುದು.
- Out of Syllabus, ಅಸ್ಪಷ್ಟ ಪ್ರಶ್ನೆಗಳ ಬಗ್ಗೆ ಮತ್ತು ಇತರೇ ನ್ಯೂನ್ಯತೆಗಳ ಬಗ್ಗೆ ವಿದ್ಯಾರ್ಥಿಗಳಿಂದ ಅಥವಾ ಸಂಸ್ಥೆಗಳಿಂದ ದೂರುಗಳು ಸ್ವೀಕೃತವಾಗಿದ್ದಲ್ಲಿ, ಅಂತಹ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಬಗ್ಗೆ ಪರೀಕ್ಷಕರ ಸಮಿತಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಮುನ್ನ ಕಾರ್ಯದರ್ಶಿಯವರ ಗಮನಕ್ಕೆ ತರುವುದು.

ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳಲ್ಲಿ ಯಾವುದೇ ತಪ್ಪುಗಳು/ದೋಷಗಳು ಕಂಡುಬಂದಲ್ಲಿ ಸಂಬಂಧಿಸಿದ ಮುಖ್ಯ ಪರೀಕ್ಷಕರ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ಡಿಸೆಂಬರ್-2023 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಎಲ್ಲಾ ಪ್ರಶ್ನೆಪತ್ರಿಕೆ ರಚನಾಕಾರರುಗಳಿಗೆ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಸಂಬಂಧಪಟ್ಟ ಪರೀಕ್ಷಕರ ಸಮಿತಿಯ ಅಧ್ಯಕ್ಷರುಗಳು/ ಸದಸ್ಯರುಗಳು- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ,

ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು –ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

Scanned with CamScanner